ಮೃದುವಾಗಿದ್ದು, ಅಕ್ಕಿ ಊಟಕ್ಕೆ ರುಚಿಯಾಗಿದೆ. ಈ ತಳಿಯ ಭತ್ತದ ಕಾಳುಗಳು ಭದ್ರ ತಳಿಯ ಭತ್ತದಂತೆ ದಪ್ಪ ಮತ್ತು ಮಧ್ಯಮ ಗಾತ್ರ ಹೋಂದಿದ್ದು, ಕುಚಲಕ್ಕಿಗೆ ಯೋಗ್ಯವಾಗಿರುವುದರಿಂದ ಗ್ರಾಹಕರ ಅದ್ಯತೆಯನ್ನು ಹೊಂದಿರುತ್ತದೆ. ಈ ತಳಿಯು ನೆರೆಹಾವಳಿಯನ್ನು 8–12 ದಿನಗಳವರೆಗು ತಡೆದು ಬೆಳೆಯುವ ಸಾಮರ್ಥ್ಯ ಹೊಂದಿದ್ದು, ಮಾಗಿದ ಪೈರು ಕೊಯ್ಲಿಗೆ ವಿಳಂಬವಾದರೂ ಮಳೆ ಗಾಳಿಯಿಂದ ಬೆಳೆಯು ನೆಲಕ್ಕೆ ಬೀಳುವುದಿಲ್ಲ.

**ತಳಿಯ ಗುಣ ಲಕ್ಷಣಗಳು:**

ಹಸಿರು ಎಲೆಗಳುಳ್ಳ, ಎತ್ತರ ನಿಲುವನ್ನು ಹೊಂದಿದ, ಈ ತಳಿಯಲ್ಲಿ ಹೆಚ್ಚಿನ ತೆಂಡೆಗಳನ್ನು ಕಾಣಬಹುದಾಗಿದೆ. ಇದು ಮಧ್ಯಮಾವಧಿ ತಳಿಯಾಗಿರುವುದರಿಂದ ಬಿತ್ತಿದ ಸುಮಾರು 130–135 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಈ ತಳಿಯನ್ನು ಕರಾವಳಿ ಭಾಗದ, ಬಯಲು ಗದ್ದೆಗಳಲ್ಲಿ ಮತ್ತು ಮುಂಗಾರು ಬೆಳೆಯಾಗಿ ಬೆಳೆಯಲು ಶಿಫಾರಸ್ಸು ಮಾಡಲಾಗಿದೆ. ಭದ್ರಾ (MO–4) ತಳಿಗಿಂತ ಎತ್ತರ (90–95 cm) ಬೆಳೆಯುವುದರಿಂದ ಹುಲ್ಲಿನ ಇಳುವರಿಯು (7.5 – 7.8 ಟನ್ / ಹೆ.) ಅಧಿಕವಾಗಿದೆ ಮತ್ತು ಈ ತಳಿಯಲ್ಲಿ ಜೊಳ್ಳು ಕಡಿಮೆ, ಭತ್ತ ಪುಷ್ಠಿದಾಯಕವಾಗಿದ್ದು, ಪ್ರತಿ ಹೆಕ್ಟೇರ್‌ಗೆ ಸುಮಾರು 50–55 ಕ್ವಿಂಟಾಲ್ ಭತ್ತದ ಇಳುವರಿಯನ್ನು ಪಡೆಯಬಹುದು.

**ಬೇಸಾಯ ಕ್ರಮಗಳು:**

| | |
|---|---|
| ಬಿತ್ತನೆ ದಿನಾಂಕ: | ಮೇ ಕೊನೆ, ಜೂನ್ 1 ನೇ ವಾರ |
| ರಸಗೊಬ್ಬರ ಪ್ರಮಾಣ: | 24:12:24 ಕಿ.ಗ್ರಾಂ/ ಎಕರೆಗೆ |
| ಹಸಿರೆಲೆ / ಕೊಟ್ಟಿಗೆ ಗೊಬ್ಬರ: | 4 ಟನ್/ 2 ಟನ್ |
| ಗಿಡಗಳ ನಡುವಿನ ಅಂತರ: | 20 ಸೆಂ. ಮೀ. – 10 ಸೆಂ. ಮೀ. |
| ಬೀಜ ಪ್ರಮಾಣ: | 25 ಕಿ. ಗ್ರಾಂ/ ಎಕರೆಗೆ |


**ಲೇಖಕರು**

**ಡಾ. ನವೀನ್ ಕುಮಾರ್, ಬಿ. ಟಿ.**

**ಡಾ. ಟಿ. ಜೆ. ರಮೇಶ**

**ಡಾ. ಮಲ್ಲಿಕಾರ್ಜುನ, ಎಲ್.**

**ಡಾ. ಚೇತನ್, ಎನ್.**

**ಡಾ. ಕೇದರನಾಥ**

**ಡಾ. ರಶ್ಮಿ, ಆರ್.**



**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ**

**ಭಾ.ಕೃ.ಸಂ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ. ಕಂಕನಾಡಿ, ಮಂಗಳೂರು – 575 002**


# ದಕ್ಷಿಣ ಕನ್ನಡದ ನೆರೆ ಮತ್ತು ತಗ್ಗು ಪ್ರದೇಶಗಳಿಗೆ ಸಹ್ಯಾದ್ರಿ ಪಂಚಮುಖಿ ಭತ್ತದ ತಳಿ


**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ**
**ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು,**
**ಕಂಕನಾಡಿ ಅಂಚೆ, ಮಂಗಳೂರು,**
**ದಕ್ಷಿಣ ಕನ್ನಡ – 575002**

www.kvkdk.org, kvkdk@rediffmail.com

0824–2431872

ಕರ್ನಾಟಕದ ಕರಾವಳಿ ಪ್ರದೇಶದ ಭತ್ತಬೆಳೆಯುವ ಬಯಲು (ನೇರೆಪೀಡಿತ) ಗದ್ದೆಗಳು ಪ್ರಮುಖವಾಗಿ ಕೇವಲ ಸಾಂಪ್ರದಾಯಿಕ ತಳಿಗಳಿಗೆ ಮಾತ್ರ ಹೆಚ್ಚಾಗಿ ಸೀಮಿತವಾಗಿವೆ. ಆದರೆ ಈ ತಳಿಗಳು ಸಾಮಾನ್ಯವಾಗಿ ಎತ್ತರವಾಗಿ ಬೆಳೆಯುವ ಗುಣ ಹೊಂದಿದ್ದು ಸುಲಭವಾಗಿ ನೆಲಕ್ಕುರುಳುವ, ರಾಸಾಯನಿಕ ಗೊಬ್ಬರಗಳಿಗೆ ಸ್ಪಂದಿಸದ ಮತ್ತು ಕಡಿಮೆ ಇಳುವರಿ ಕೊಡುವ ತಳಿಗಳಾಗಿರುತ್ತವೆ. ಸಾಮಾನ್ಯ ದಪ್ಪ ಗಾತ್ರದ ಎಂ.ಓ–4 ಭತ್ತದ ತಳಿಯನ್ನು ವ್ಯಾಪಕವಾಗಿ ಕರಾವಳಿ ಕರ್ನಾಟಕದಲ್ಲಿ ಮುಂಗಾರಿನಲ್ಲಿ ಬೆಳೆಯಲಾಗುತ್ತಿದ್ದರೂ, ಬಯಲು ಗದ್ದೆಗಳಲ್ಲಿ ಇವು ನೆಲಕ್ಕುರುಳುವ ಮತ್ತು ವಾರಮಾತ್ರ ನೆರೆನೀರಿನಲ್ಲಿ ಮುಳುಗಡೆಗೊಂಡರೂ ಕಡಿಮೆ ಇಳುವರಿಗೆ ಕಾರಣವಾಗುವ ಗುಣವನ್ನು ಹೊಂದಿವೆ. ಕರಾವಳಿ ಪ್ರದೇಶದಲ್ಲಿ ವಾರ್ಷಿಕವಾಗಿ ಸುಮಾರು 300 ಹೆಕ್ಟರ್‌ಗಿಂತಲೂ ಅಧಿಕ ಭತ್ತ ಬೆಳೆಯುವ ಪ್ರದೇಶ ನಿರಂತರ ಮಳೆಯ ಕಾರಣ ನೆರೆ ಪೀಡಿತವಾಗಿದ್ದು, ಈ ಕಾರಣದಿಂದ ರೈತರು ಕಡಿಮೆ ಆದಾಯ ಹೊಂದುವಂತಾಗಿದೆ. ಆದ್ದರಿಂದ ಬಯಲು ಗದ್ದೆಯ ಪರಿಸರಕ್ಕೆ ಸೂಕ್ತವಾಗಬಲ್ಲ ಭತ್ತದ ತಳಿಯ ಅಭಿವೃದ್ಧಿ ಅಥವಾ ಸೂಕ್ತ ಆಯ್ಕೆಯು ಈ ಪ್ರದೇಶದ ರೈತರ ಆದಾಯ ಹೆಚ್ಚಿಸಲು ಸಹಕಾರಿಯಾಗಬಲ್ಲದು. ಹೆಚ್ಚಿನ ಇಳುವರಿ ಸಾಮರ್ಥ್ಯದ ತಳಿಗಳ ಸಂಶೋಧನಾ ಪ್ರಯತ್ನಗಳ ಫಲವಾಗಿ ಸಹ್ಯಾದ್ರಿ ಪಂಚಮುಖಿ ಕೆಂಪು ಭತ್ತದ ತಳಿಯು ಬಯಲು, ನೆರೆಪೀಡಿತ ಭತ್ತದ ಗದ್ದೆಗಳಿಗೆ ಸೂಕ್ತ ತಳಿಯಾಗಿ ಗುರುತಿಸಲ್ಪಟ್ಟಿದೆ.

ಈ ತಳಿಯು ಮಧ್ಯಮ ಗಾತ್ರದ ಕಾಳುಗಳನ್ನು ಹೊಂದಿದ್ದು, ಹೆಚ್ಚು ಇಳುವರಿ ಕೊಡಬಲ್ಲ ಹಾಗೂ ಜೈವಿಕ ಮತ್ತು ಅಜೈವಿಕ ಒತ್ತಡಗಳನ್ನೂ ತಡೆಯಬಲ್ಲ ಸಾಮರ್ಥ್ಯವನ್ನು ಹೊಂದಿರುತ್ತವೆ. ಈ ತಳಿಯು ಬಯಲು ಗದ್ದೆಗಳಿಗೆ ಮುಂಗಾರು ಬೆಳೆಯಾಗಿ ಅತ್ಯಂತ ಪ್ರಶಸ್ತವಾಗಿರುತ್ತದೆ. ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಈ ತಳಿಯು ನಿರಂತರವಾಗಿ ಹೆಕ್ಟರ್ ಒಂದಕ್ಕೆ ಸರಾಸರಿ 5603 ಕಿಲೋಗ್ರಾಂನಂತೆ ಇಳುವರಿ ಕೊಟ್ಟಿದ್ದು, ಮುಂಗಾರಿನಲ್ಲಿ ಇದು ಸ್ಥಳೀಯ ಹೋಲಿಕೆ ತಳಿ ಎಂ.ಓ–4ನ ಹೆಕ್ಟರ್ ಒಂದರ 4877 ಕಿ.ಗ್ರಾಂ ಇಳುವರಿಗಿಂತಲೂ ಶೇ. 14 ರಷ್ಟು ಹೆಚ್ಚಿನದಾಗಿರುತ್ತದೆ. ಹಾಗೆಯೇ ಬಹು ಕ್ಷೇತ್ರ ಪರೀಕ್ಷೆಯಲ್ಲಿ ಹೆಕ್ಟರ್ ಒಂದಕ್ಕೆ 5556 ಕಿ.ಗ್ರಾಂ. ಇಳುವರಿ ಕೊಟ್ಟಿದ್ದು ಇದು ಎಂ.ಓ–4 ತಳಿಯ ಹೆಕ್ಟರ್ ಒಂದರ 4487 ಕಿ.ಗ್ರಾಂ. ಇಳುವರಿಗಿಂತಲೂ ಶೇ. 23 ರಷ್ಟು ಹೆಚ್ಚಿನದಾಗಿರುತ್ತದೆ. ಇದು ಕಣೆ ಕೀಟ, ಕಾಂಡ ಕೊರೆಯುವ ಹುಳ, ಎಲೆ ಸುರುಳಿ ಕೀಟ ಮತ್ತು ಬೆಂಕಿರೋಗಗಳನ್ನು ತಾಳಬಲ್ಲ ಸಾಮರ್ಥ್ಯವನ್ನು ಹೊಂದಿರುತ್ತದೆ. ಈ ತಳಿಯು ನೆರೆಹಾವಳಿಯನ್ನು 8–12 ದಿನಗಳವರೆಗೂ ತಡೆದು ಬೆಳೆಯುವ ಸಾಮರ್ಥ್ಯ ಹೊಂದಿದ್ದು, ಮಾಗಿದ ಪೈರು ಕೊಯ್ಲಿಗೆ ವಿಳಂಬವಾದರೂ ಮಳೆ ಗಾಳಿಯಿಂದ ಬೆಳೆಯು ನೆಲಕ್ಕೆ ಬೀಳುವುದಿಲ್ಲ. ಈ ತಳಿಯ ಕೆಂಪು ಬಣ್ಣದ ಮದ್ಯಮಗಾತ್ರದ ಕಾಳು, ಮದ್ಯಮಾವಧಿ, ಮದ್ಯಮ ಎತ್ತರ (90–95 cm), ನೆಲಕ್ಕುರಳದೇ ಇರುವ ಗುಣ, ಸಾಮಾನ್ಯ ಬಿತ್ತನೆಗೆ ಸೂಕ್ತವಾಗುವ ಮತ್ತು ಕಣೆಕೀಟ ಇತ್ಯಾದಿ ಪ್ರಮುಖ ಕೀಟ ಮತ್ತು ಬೆಂಕಿ ರೋಗದ ನಿರೋಧಕತ್ವಗಳ ಕಾರಣ ರೈತರಿಂದ ಅನುಮೋದಿಸಲ್ಪಟ್ಟಿರುತ್ತದೆ. ಈ ತಳಿಯು ರುಚಿಕರವೂ ಆಗಿದ್ದು, ಅಲ್ಪ ಪ್ರಮಾಣದ ಪರಿಮಳ, ಕನಿಷ್ಠ ಬೇಯಿಸುವ ಅವಧಿ ಮತ್ತು ಬೇಯಿಸಲು ಕನಿಷ್ಠ ನೀರಿನ ಅಗತ್ಯತೆಯ ಕಾರಣ ಕುಚ್ಚಿಗೆ ಅಕ್ಕಿಯ ತಯಾರಿಗೂ ಪ್ರಶಸ್ತವಾಗಿದೆ.

**ವಿಶೇಷ ಗುಣಗಳು:**

ಈ ತಳಿಯು ಕಣೆ ಕೀಟ ಭಾಧೆಯನ್ನು ತಡೆದು ಬೆಳೆಯುವಂತಹ ಸಾಮರ್ಥ್ಯ ಹೊಂದಿದೆ. ಬೆಂಕಿ ಮತ್ತು ಕಂದು ಮಚ್ಚೆ ರೋಗಕ್ಕೆ ಶೀಘ್ರ ಪ್ರತಿರೋಧವನ್ನು ಹೊಂದಿದೆ, ಕೆಂಪು ಭತ್ತದ ಈ ತಳಿಯ ನೋಡಲು ಆಕರ್ಷಣಿಯವಾಗಿದ್ದು, ಅನ್ನ ಬೇಯಿಸಲು ಭದ್ರ (MO–4) ತಳಿಗೆ ಹೋಲಿಸಿದರೆ ಇದಕ್ಕೆ ಕಡಿಮೆ ನೀರು ಬೇಕು ಮತ್ತು ಬೇಯಿಸಿದ ಅನ್ನ